# ಉತ್ತರ–ದಕ್ಷಿಣ ನೃತ್ಯ ಸಂಗಮ!

**ಉತ್ತರ ಭಾರತದ ಪ್ರಸಿದ್ಧ ಶಾಸ್ತ್ರೀಯ ನೃತ್ಯ ಕಥಕ್, ದಕ್ಷಿಣ ಭಾರತದ ಜನಪ್ರಿಯ ನೃತ್ಯ ಭರತನಾಟ್ಯ... ಈ ಎರಡೂ ಶೈಲಿಗಳಲ್ಲಿ ಪ್ರಬುದ್ಧವಾಗಿ ನೃತ್ಯ ಮಾಡುವ ಮುದ್ರಾ ಧನಂಜಯ, ಛಾಪು ಮೂಡಿಸುತ್ತಿರುವ ಭರವಸೆಯ ಕಲಾವಿದೆ. ಮುಂಬಯಿಯ ಜುಹೂ ಬೀಚ್‌ನಲ್ಲಿ ಈಚೆಗೆ ಮುದ್ರಾ ನಡೆಸಿಕೊಟ್ಟ ನೃತ್ಯಪ್ರದರ್ಶನ ಅಪಾರ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ.**

**ಉಮಾ ವೇಣೂರು**




ಕಥಕ್ ಉತ್ತರ ಭಾರತದ ಅತ್ಯಂತ ಜನಪ್ರಿಯ ಶಾಸ್ತ್ರೀಯ ನೃತ್ಯ ಪ್ರಕಾರ. 'ಕಥಕ್' ಎಂದರೆ ನೃತ್ಯದ ಮೂಲಕ ಕಥೆ ಹೇಳುವುದು ಎಂದರ್ಥ, ಇದರಲ್ಲಿ ಪುರಾಣ ಹಾಗೂ ದಂತಕಥೆಗಳು ಅಡಕವಾಗಿದ್ದು, ಪಾದಚಲನೆ, ಹಸ್ತಮುದ್ರೆ ಮತ್ತು ಆಂಗಿಕ ಚಲನೆ ಮೂಲಕ ಕಥಾಹಂದರವನ್ನು ಪ್ರಸ್ತುತಪಡಿಸಲಾಗುತ್ತದೆ. ಲಖನೌ, ಜೈಪುರ ಹಾಗೂ ಬನಾರಸ್ ಘರಾಣೆಗಳಲ್ಲಿ ಕಥಕ್ ನೃತ್ಯ ಹಾಸುಹೊಕ್ಕಾಗಿರುತ್ತದೆ.

ಇದು ಕಥಕ್ ಕಥೆಯಾದರೆ ದಕ್ಷಿಣಾದಿಯ ಮನಮೋಹಕ ನೃತ್ಯ ಭರತನಾಟ್ಯದ ವ್ಯಾಖ್ಯಾನವೂ ಬೇರೆ, ಶೈಲಿಯೂ ವಿಭಿನ್ನ. ಈ ನೃತ್ಯ ದಕ್ಷಿಣದ ತಮಿಳುನಾಡಿನಲ್ಲಿ ಉದ್ಭವಿಸಿದ ಅತ್ಯಂತ ಪುರಾತನ ಶಾಸ್ತ್ರೀಯ ನೃತ್ಯ ಪ್ರಕಾರ. ಭರತ ಮುನಿಯ 'ನಾಟ್ಯಶಾಸ್ತ್ರ'ದ ಆಧಾರದ ಮೇಲೆ ಭರತನಾಟ್ಯ ನಿರೂಪಿತವಾಗಿದೆ. ಇಲ್ಲಿ ಭಾವ (ಭಾವನೆ), ರಾಗ (ಸಂಗೀತ), ತಾಳ (ಲಯ) ಗಳ ಸಂಯೋಜನೆಯಿದ್ದು, ಭಂಗಿ, ಹಸ್ತ ಮುದ್ರೆಗಳು ಮತ್ತು ಅಭಿನಯದ ಮೂಲಕ ಕಥೆಯನ್ನು ಹೇಳಲಾಗುತ್ತದೆ. ಇದನ್ನು ಭಕ್ತಿ, ಕಲೆ ಮತ್ತು ಸಂಸ್ಕೃತಿಯ ಅದ್ಭುತ ಮಿಶ್ರಣ ಎನ್ನಬಹುದು.



ಸಾಮಾನ್ಯವಾಗಿ ಭರತನಾಟ್ಯದಲ್ಲಿ ಹಿಡಿತ ಸಾಧಿಸಿರುವವರು, ಇತರ ನೃತ್ಯ ಪ್ರಕಾರಗಳನ್ನು ಹವ್ಯಾಸವಾಗಿಯೋ ಅಥವಾ ಇನ್ನೂ ಒಂದು ನೃತ್ಯ ಶೈಲಿ ತಿಳಿದಿರಲಿ ಎಂಬ ಕಾರಣಕ್ಕಾಗಿ ಕಲಿಯುತ್ತಾರೆ. ಒಂದೇ ಪ್ರಕಾರದಲ್ಲಿ ಸಾಧನೆಯ ಹಾದಿ ಹಿಡಿಯುತ್ತಾರೆ. ಆದರೆ ಬೆಂಗಳೂರಿನ ಯುವ ನೃತ್ಯಕಲಾವಿದೆ ಮುದ್ರಾ ಧನಂಜಯ ಭರತನಾಟ್ಯ ಹಾಗೂ ಕಥಕ್ ಎರಡರಲ್ಲೂ ಈಗಾಗಲೇ ಛಾಪು ಮೂಡಿಸಿದ್ದು, ಭರವಸೆಯ ಯುವ ಕಲಾವಿದೆಯಾಗಿ ರೂಪುಗೊಂಡಿದ್ದಾರೆ.

ಅದು ಮುಂಬಯಿಯ ಜುಹೂ ಕಡಲ ತೀರದಲ್ಲಿ ಸೂರ್ಯಾಸ್ತದ ದೃಶ್ಯ ಮನಮೋಹಕ, ಪ್ರವಾಸಿಗರು, ಸೆಲೆಬ್ರಿಟಿಗಳು ಸುಂದರ ಸಂಜೆ ಕಳೆಯಲು ಆದ್ಯತೆಯ ಮೇರೆಗೆ ತೆರಳುವುದು ಇದೇ ಬೀಚ್‌ನ ತೀರಕ್ಕೆ. ಈ ಕಡಲತೀರದಲ್ಲಿ ಈಚೆಗೆ ಸೂರ್ಯಾಸ್ತದ ಹೊತ್ತಿಗೆ ಕಾಲಿಗೆ ಗೆಜ್ಜೆಕಟ್ಟಿದ ಕಲಾವಿದರು ಭರತನಾಟ್ಯ ಪ್ರದರ್ಶನ ನೀಡಿದರು. ನೀಲಾ ಘೋಷ್ ಪ್ರತಿಷ್ಠಾನ 'ಪ್ರಾಚಿ' (ಮುಂಬಯಿಯ ಪ್ರಖ್ಯಾತ ನೃತ್ಯಗಾರ್ತಿ) ಹೆಸರಿನಲ್ಲಿ ಆಯೋಜಿಸಿದ ಈ ನೃತ್ಯ ಕಾರ್ಯಕ್ರಮದ ಥೀಮ್ 'ಸಖ್ಯ' ಎಂದಾಗಿತ್ತು. ನೃತ್ಯ ಮಾಡಿದ್ದು ಬೆಂಗಳೂರಿನ ಮುದ್ರಾ ಧನಂಜಯ್ ಮತ್ತು ಶ್ರೇಯಸ್ ಸುನಿಲ್ ನಾಯರ್. ಬೀಚ್‌ನಲ್ಲಿ ಜಾಲಿಯಾಗಿ ಅಡ್ಡಾಡಲು ಬಂದವರೆಲ್ಲ ಸುಂದರ ವೇದಿಕೆಯಲ್ಲಿ ನೃತ್ಯ–ನೃತ್ತದಲ್ಲಿ ತೊಡಗಿದ್ದ ಕಲಾವಿದರತ್ತ ದೃಷ್ಟಿನೆಟ್ಟಿದ್ದಲ್ಲದೆ ಡಾನ್ಸ್‌ನ ಪ್ರತಿ ಐಟಂ ಮುಗಿದಾಗಲೂ ವಾಹ್, ವಾಹ್ ಎಂದು ಉದ್ಗಾರ ತೆಗೆದದ್ದು ಕಲಾವಿದರಿಗೆ ಸ್ಫೂರ್ತಿ ನೀಡಿದಂತಿತ್ತು. ಕಲ್ಯಾಣಿ ರಾಗದ ಜತಿಸ್ವರ, ಬಳಿಕ ಮಾಡಿದ ಪದಂ, ನಂತರದ ನೃತ್ತಾಂಜಲಿ ಎಲ್ಲ ನೃತ್ಯಗಳು ಪ್ರೇಕ್ಷಕರನ್ನು ಸೂಜಿಗಲ್ಲಿನಂತೆ ಸೆಳೆದದ್ದು ಆ ಸಂಜೆಯನ್ನು ಮತ್ತಷ್ಟು ಸುಮಧುರವಾಗಿಸಿದ್ದು, ಸ್ಮರಣೀಯ ಕಾರ್ಯಕ್ರಮವಾಗಿ ದಾಖಲಾಯಿತು.

ಮುದ್ರಾ ಧನಂಜಯ ಅವರ ಮನೆಯಲ್ಲಿ ಸದಾ ಸಂಗೀತ ನೃತ್ಯದ್ದೇ ವಾತಾವರಣ. ತಾಯಿ ಶುಭಾ ಧನಂಜಯ ಅವರೇ ನೃತ್ಯದ ಗುರು. ಪ್ರದರ್ಶಕ ಕಲೆ ವಿಭಾಗದಲ್ಲಿ ಪದವಿ ಶಿಕ್ಷಣ ಪಡೆದ ಮುದ್ರಾ ಅವರ ಆಸಕ್ತಿಯೂ ನೃತ್ಯವೇ. ತಮ್ಮ ಹನ್ನೆರಡನೇ ವಯಸ್ಸಿನಲ್ಲಿ ಭರತನಾಟ್ಯ ರಂಗಪ್ರವೇಶ ಮಾಡಿದವರು. ಹಲವಾರು ರಾಜ್ಯಮಟ್ಟದ ನೃತ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದದ್ದಲ್ಲದೆ, ಕಲಾಪ್ರತಿಭೋತ್ಸವ ಪ್ರಶಸ್ತಿ, ನೃತ್ಯವಿಲಾಸಿನಿ, ಆರಾಧನಾ ಸಮ್ಮಾನ್ ಮುಂತಾದ ಬಿರುದುಗಳನ್ನೂ ಪಡೆದಿದ್ದಾರೆ. ಕಲೆ ಮಾತ್ರವಲ್ಲದೆ ಕ್ರೀಡೆಯಲ್ಲೂ ಆಸಕ್ತಿ ತಳೆದಿರುವ ಮುದ್ರಾ ಕ್ರೀಡೆಯಲ್ಲೂ ಅನೇಕ ಪದಕಗಳನ್ನು ಗೆದ್ದಿರುವುದು ಈಕೆಯ ಬಹುಶ್ರುತ ಪ್ರತಿಭೆಗೆ ಸಾಕ್ಷಿ.

## ಜನಮೆಚ್ಚುಗೆ

ತಮ್ಮದೇ ನಾಟ್ಯಾಂತರ ನೃತ್ಯಶಾಲೆಯ ತಂಡದೊಂದಿಗೆ ಮೈಸೂರು ದಸರಾ, ಹಂಪಿ ಉತ್ಸವ, ಒಡಿಶಾದಲ್ಲಿ ನಡೆದ ರಾಷ್ಟ್ರೀಯ ಉತ್ಸವ, ದೆಹಲಿ, ಮುಂಬಯಿ, ಉದಯಪುರಗಳಲ್ಲಿ ನಡೆದ ವಿವಿಧ ಉತ್ಸವಗಳಲ್ಲಿ ಮುದ್ರಾ ನೃತ್ಯ ಮೆಚ್ಚುಗೆ ಗಳಿಸಿದೆ. ಇಂಡೋನೇಷ್ಯಾದ ಬಾಲಿ, ಚೀನಾದ ಬೀಜಿಂಗ್, ಜಿನಾನ್, ಅಮೆರಿಕದಲ್ಲಿ ನಡೆದ ವಿವಿಧ ನೃತ್ಯ ಕಾರ್ಯಕ್ರಮಗಳಲ್ಲಿ ಮುದ್ರಾ ನೃತ್ಯ ಜನಪ್ರಿಯತೆ ಗಳಿಸಿದೆ.

ಇಂದಿನ ಒತ್ತಡದ ಬದುಕಿನಲ್ಲಿ ಮನಸ್ಸಿಗೆ ನೆಮ್ಮದಿ ನೀಡಲು, ಲಲಿತಕಲೆಗಳು ಸಹಕಾರಿ. ಸಂಗೀತ, ನೃತ್ಯ, ನಾಟಕ, ಯಕ್ಷಗಾನಗಳಂತಹ ಕಲಾಪ್ರಕಾರ ಮಾನಸಿಕ ಜಂಜಡ ದೂರ ಮಾಡಿ ಸಮಾಜದಲ್ಲಿ ಸದ್ಭಾವನೆ ಮೂಡಿಸಲು ಸಹಕಾರಿ. ಸಂಗೀತವೇ ಇರಲಿ, ನೃತ್ಯವೇ ಇರಲಿ ಅವುಗಳ ಮೇಲೆ ಪ್ರೀತಿ ಇಟ್ಟು ಸಾಧನೆ, ಪರಿಶ್ರಮ ಛಲದಿಂದ ಸಿದ್ಧಿಸಿಕೊಂಡರೆ ಕಲಾಜಗತ್ತು ಎಂದಿಗೂ ಬಡವಾಗದು.

ಪ್ರತಿಕ್ರಿಯಿಸಿ:
feedback@sudha.co.in